ಕಥೆ



ನಾಗರಾಜ ಕೋರಿ
ಕಲೆ: ರೂಪಶ್ರೀ ಕಲ್ಲಿಗನೂರು

# ಉಡ ಹಿಡಿತ



ಚಂದಪೂರ ಸುತ್ತ ಜಾಲಿನೇ ಆವರಿಸಿಕೊಂಡಿದೆ. ಈ ಜಾಲಿಗೆ ಹತ್ತಿಕೊಂಡ ಒಂದೆರಡು ಮನೆಗಳಲ್ಲಿ ಕಳ್‌ದ್ಯಾವನ ಮನೆ, ರಾಗಪ್ಪನ ಮನೆ ಇದ್ವು.

ಈ ಕಳ್‌ದ್ಯಾವ, ರಾಗಪ್ಪ ಒಂದೇ ಜಾತಿಯವರು. ಈ ಎರಡೂ ಮನೆಗಳು ಮೊದ್ಲಿಂದಲೂ ಬ್ಯಾಟೆ ಆಡಿಕೊಂಡು ಬಂದಿದ್ವು. ಈಗೀಗ ರಾಗಪ್ಪನೇ ಬ್ಯಾಟೆ ಆಡೋದು ಬಿಟ್ಟು, ಮನೇನೆ ಪ್ರಪಂಚ ಅಂದುಕೊಂಡು ಕೂತಿದ್ದ. ಇದ್ರಾಗ ಕಳ್‌ದ್ಯಾವ ಬ್ಯಾಟಿ ಆಡೋದು ಬಿಟ್ಟಿರಲಿಲ್ಲ. ಅವತ್ತು ಕಳ್‌ದ್ಯಾವ ಎಂದಿನಂತೆ ಮೊಲದ ಬ್ಯಾಟಿ ಆಡಿ ಬಂದು, ಅಡಿಗಿ ಮಾಡಿ ರಾಗಪ್ಪಗ ಈಟಂತ ಕೊಟ್ಟು ಬಂದಿದ್ದ. ಕೊಟ್ಟ ಬ್ಯಾಟಿನ ಬಿಡಬಾರದಂತ ರಾಗಪ್ಪ ಬ್ಯಾಟಿನ ಇನ್ನಷ್ಟು ಬೆಚ್ಚಗ ಮಾಡಿಕೊಂಡು ಅದೇತಾನೆ ರುಚಿಮಾಡಿ ಉಣ್ಣಾಕ ಕೂತಿದ್ದ.

'ರಾಗಣ್ಣ ನಿನಗ ಇನ್ನ ಗೊತ್ತಿಲ್ಲನು... ಬೆಂಗಳೂರಾಗ ದುಡ್ಯಾಕ ಹೋದವ್ರು ಅಲ್ಲಿದ್ದ ಹೆಂಗಸ್ರೆಲ್ಲ ಮನಿಮನಿಗೆ ಕಸಮುಸ್ರಿ ತೊಳ್ಯಾಕ ಹೋಗ್ತರಂತ. ಹಂಗ ಹೋದವ್ರು ಆ ಮನಿಓನರ್ ಜತಿ ಸಾವಿರ, ಐನೂರಕ್ಕ ಮುಸ್ರಿ ತಿಕ್ಕ ನೆಪಕ್ಕ ಸ್ವಲ್ಪಹೊತ್ತು ಮಕ್ಕಂದು ಬರತಾರಂತ... ಮೊನ್ನೆಮೊನ್ನೆ ಹೋದ ಲ್ಯಾಡ್ಯಾನ ಹೆಣ್ತಿ ಗುಲ್ಲಮ್ಮ, ಶಿವಬಸ್ಯನ ಮಗಳು ಬದ್ರಿ ಇದೇ ದಗದ ಮಾಡಾಕ ಕುಂತಾರಂತ ಮನೆಮುಚ್ಕೊ ಸೂಳೇರು...' ಅಂತ ಗರ್ರಪ್ಪ, ರಾಗಪ್ಪನ ಮುಂದ ಏಕಾ ಕೂತ್ಕಂಡು ಬೆಂಗಳೂರಾಗ ನಡೆದದ್ದನ್ನ ಡಿಟೇಲಾಗಿ ಎರಡು ಮೂರು ಸಲ ಒತ್ತೊತ್ತಿ ಹೇಳಿ ಹೋಗಿದ್ದ. ರಾಗಪ್ಪ ಮೊಲದ ಬ್ಯಾಟಿನ ಸವಿಯುತ್ತಲೇ ಇದನ್ನೆಲ್ಲಾ ಕೇಳಿಸಿಕೊಂಡು ಬೆಂಗಳೂರಾಗಿದ್ದ ತನ್ನ ಮಗನಾದ ಶೇಕ್ರ, ಸೊಸಿಯಾದ ಪಿಂಜಿಯ ಮೇಲೆ ಸಿಟ್ಟು ಒತ್ತರಿಸಿ ಬಂತು. ಉಣ್ಣಬಾಯಿಲೆ ಗಟಗಟ ತಣ್ಣೀರು ಕುಡುದು, ಮುಂಜಾನೆಯಿಂದ ಚಾರ್ಜಿಂಗಿಗಿಟ್ಟ ಮೊಬೈಲ್